8. ಶ್ರೀ ಕೂರ್ಲಪ್ಪ,
ತಿಗಳರಪಾಳ್ಯ, ಕರಿಓಬನಹಳ್ಳಿ ದಾಖಲೆ, ಯಶವಂತಪುರ ಹೋಬಳಿ – ಸ್ವತ್ತಿನ ಅಳತೆ 30 x 40.

9. ಶ್ರೀ ಸುಲದಯ್ಯ,
ತಿಗಳರಪಾಳ್ಯ, ಕರಿಓಬನಹಳ್ಳಿ ದಾಖಲೆ, ದೊಡ್ಡಬಿದರುಕಲ್ಲು ಗ್ರಾಮ ಪಂಚಾಯತಿ ವ್ಯಾಪ್ತಿ – ಸ್ವತ್ತಿನ ಅಳತೆ 30 x 45.

ಆ) ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವುದರಿಂದ, ಇತ್ಯರ್ಥವಾದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಇ) ಯಾವುದು ಇಲ್ಲ.

1061 ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಪ್ಪಳ ಜಿಲ್ಲೆಯ ವ್ಯಾಪ್ತಿಯಲ್ಲಿ ಇರುವ ಒಟ್ಟು ಬಸ್ ಘಟಕಗಳೆಷ್ಟು;

ಆ) ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ತಾವರಗೇರಾ ಪಟ್ಟಣಕ್ಕೆ ಬಸ್–ಘಟಕವನ್ನು ಹೊಸದಾಗಿ ಮಂಜೂರು ಮಾಡಲು ಕ್ರಮ ಕೈಗೊಂಡಿದೆಯೇ: ಹಾಗಿದ್ದಲ್ಲಿ ಅದು ಯಾವ ಹಂತದಲ್ಲಿದೆ?

ಶ್ರೀ ಆರ್.ಅಶೋಕ್ (ಸಾರಿಗೆ ಸಚಿವರು) :

ಅ) 4.

ಆ) ಕುಷ್ಟಗಿ ತಾಲ್ಲೂಕಿನಲ್ಲಿ ಬರುವ ತಾವರಗೇರೆಯು ಹೋಬಳಿ ಕೇಂದ್ರವಾಗಿದ್ದು, ಕುಷ್ಟಗಿ ತಾಲ್ಲೂಕು ಕೇಂದ್ರದಿಂದ 24 ಕಿ.ಮೀ. ದೂರವಿರುವುದರಿಂದ ತಾವರೆಗೇರೆಯಲ್ಲಿ ಇನ್ನೊಂದು ಹೊಸದಾಗಿ ಡಿಪೋ ಪ್ರಾರಂಭ ಮಾಡುವುದು ಆರ್ಥಿಕ ಹಿತದೃಷ್ಟಿಯಿಂದ ಪೂರಕವಾಗಿರುವುದಿಲ್ಲ.

983 ಶ್ರೀ ವಿಶ್ವನಾಥ್ ಎಸ್.ಆರ್. : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೀಲಗಿರಿ ಮರ ಬೆಳೆಯಿಂದ ಪರಿಸರಕ್ಕೆ ಮಾರಕವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದರಿಂದ ಮಳೆಯೂ ಸಹ ಕಡಿಮೆಯಾಗುವುದಾಗಿ ತಜ್ಞರು ಅಭಿಪ್ರಾಯ ಪಟ್ಟಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಇ) ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ನೀಲಗಿರಿ ಬೆಳೆಯಿಂದ ಪರಿಸರಕ್ಕೆ ಮಾರಕವಾಗುತ್ತಿರುವುದಕ್ಕೆ ಯಾವುದೇ ವೈಜ್ಞಾನಿಕ ಆಧಾರಗಳಿಲ್ಲ.

ಆ) ಈ ಬಗ್ಗೆ Overseas Development Agencies of United Kingdom (ODA) ನೆರವಿನಿಂದ "Effect of Fast Growing Species in Karnataka" ಎಂಬ ಸಂಶೋಧನೆಯನ್ನು ಬ್ರಿಟನ್ ದೇಶದಲ್ಲಿರುವ Oxford Forestry Institute ಮತ್ತು Institute of Hydrology, Wallingford ಎಂಬ ಸಂಸ್ಥೆಗಳ ತಾಂತ್ರಿಕ ಸಲಹೆ ಮತ್ತು ಸಹಕಾರದೊಡನೆ ಅಂತರ್ಜಲದ ಮಟ್ಟದ ಬಗ್ಗೆ ಅಧ್ಯಯನವನ್ನು ಮಾಡಿದ್ದು, ಅದರ ಮುಖ್ಯಾಂಶಗಳು ಕೆಳಕಂಡಂತಿವೆ.

1) ಒಣ ಪ್ರದೇಶದಲ್ಲಿ ಮಧ್ಯಮ ಮಣ್ಣಿನ ಆಳ ಇರುವೆಡೆ ನೀಲಗಿರಿ ನೆಡುತೋಪುಗಳಿಂದ ನೀರಿನ ಬಳಕೆಯ ಸ್ಥಳೀಯ ಶುಷ್ಕ ಎಲೆ ಉದುರಿಸುವ ಕಾಡಿಗಿಂತ ಹೆಚ್ಚೇನಿರುವುದಿಲ್ಲ.
2) ಈ ಸ್ಥಳಗಳಲ್ಲಿ ನೀಲಗಿರಿ ಮತ್ತು ಸ್ಥಳೀಯ ಕಾಡಿನ ನೀರಿನ ಬಳಕೆಯು ವಾರ್ಷಿಕ ಮಳೆಗೆ ಸಮನಾಗಿರುತ್ತದೆ.
3) ಅಧ್ಯಯನ ನಡೆಸಿದ ಸ್ಥಳಗಳಲ್ಲಿ ಜಲ ಮಟ್ಟದಿಂದ ನೀಲಗಿರಿ ಮರಗಳು ನೀರನ್ನು ಸೆಳೆದಿರುವುದಕ್ಕೆ ಯಾವುದೇ ಸಾಕ್ಷಾಧಾರಗಳಿಲ್ಲ.

ಇ) ಅರಣ್ಯ ಇಲಾಖೆಯು, ನೀಲಗಿರಿ ಸಸಿ ನೆಡೆಸುವುದನ್ನು ಸಂಪೂರ್ಣವಾಗಿ ನಿಲ್ಲಿಸಿದ್ದು, ರೈತರಿಗೆ ನೀಲಗಿರಿ ಸಸಿಗಳನ್ನು ಸರಬರಾಜು ಮಾಡುತ್ತಿಲ್ಲ.

760 ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ) : ಮಾನ್ಯ ಅಬಕಾರಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ನಾಗರೀಕರಿಗೆ ಪ್ರಸ್ತುತ ಸರ್ಕಾರವು ಒದಗಿಸುತ್ತಿರುವ ಕುಡಿಯುವ ನೀರಿನ ದೈನಂದಿನ ಪ್ರಮಾಣವೆಷ್ಟು?

ಆ) ಪ್ರತಿ ನಾಗರೀಕರಿಗೆ ಅವಶ್ಯವಿರುವ ನೀರಿನ ಪ್ರಮಾಣವೆಷ್ಟು, ಅಂದಾಜು ಮಾಡಲಾದ ಮಾನದಂಡ ಯಾವುದು?